**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 12.12.2025**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಆರ್ ವಕೀಲರಿಂದ**

ಆರೋಪಿ ನಮ್ಮ ಊರಿನವರೇ . ಆರೋಪಿ 25 ವರುಷಗಳಿಂದ ಕೂಡ್ಲೂರಿನಲ್ಲಿ ವಾಸವಿರುತ್ತಾರೆ. ಆರೋಪಿ ಅಣ್ಣನ ಮಗನ ಮನೆಯಲ್ಲಿ ಒಟ್ಟಿಗೆ ವಾಸವಿರುತ್ತಾರೆ. ಸುಂದರನಗರ ಗ್ರಾಮದಲ್ಲಿ ಆರೋಪಿ ವಾಸವಿರುತ್ತಾರೆ. ಆರೋಪಿ ಮತ್ತು ನನ್ನ ನಡುವೆ ಇದೆ ಮೊದಲ ಮತ್ತು ಕೊನೆ ವ್ಯವಹಾರ ಎಂದರೆ ಸರಿ . ಆರೋಪಿ ನನಗೆ ದಿಃ 01.09.2020 ರಲ್ಲಿ ಹಣವನ್ನು ಸಾಲವಾಗಿ ಕೇಳಿರುತ್ತಾರೆ. ಸದರಿ ದಿನಾಂಕವನ್ನು ನಾನು ಆರೋಪಿಗೆ ಕೊಟ್ಟ ತಿಳುವಳಿಕೆ ಪತ್ರದಲ್ಲಿ ತೋರಿಸಿರುವುದಿಲ್ಲ. ವ್ಯವಹಾರ ಮಾಡಲು ಆರೋಪಿಯು ನನ್ನ ಬಳಿ ಹಣವನ್ನು ಪಡೆದಿರುತ್ತಾರೆ. ಯಾವ ವ್ಯವಹಾರ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಕಾಫಿ ಹಸ್ಕಿನ ವ್ಯಾಪಾರಕ್ಕಾಗಿ ಹಣವನ್ನು ತೆಗೆದುಕೊಂಡಿರಬಹುದು ಎಂದು ನುಡಿದರು. ನನ್ನ ಮತ್ತು ಆರೋಪಿ ಮಧ್ಯೆ ಮಾತ್ರ ಹಣಕಾಸಿನ ವ್ಯವಹಾರ ಇತ್ತು ಇನ್ಯಾರು ಮಧ್ಯಸ್ಥರು ಇರುವುದಿಲ್ಲ. ಈ ಪ್ರಕರಣದಲ್ಲಿ ಆರೋಪಿ ಗೆ ನಾನು 3 ಬಾರಿ ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತೇನೆ. 3 ಬಾರಿ ತಿಳುವಳಿಕೆ ಪತ್ರ ನೀಡುವ ಉದ್ದೇಶ ಎಂದರೆ ಸಾಕ್ಷಿಯು ಎರಡು ಬಾಡರಿ ಕಳುಹಿಸಿದ ತಿಳುವಳಿಕೆ ಪತ್ರವನ್ನು ತೆಗೆದುಕೊಂಡಿರುವುದಿಲ್ಲ ಮೂರನೇ ಬಾರಿ ಸ್ಪೀಡ್ ಪೋಸ್ಟ ಮೂಲಕ ಳುಹಿಸಿದ ಪತ್ರವನ್ನು ಪಡೆದುಕೊಂಡಿರುತ್ತಾರೆ. ಆದ್ದರಿಂದ ಮೂರು ಬಾರಿ ಕಳುಹಿಸಿರುತ್ತೇನೆ ಎಂದು ನುಡಿದರು. 3 ನೇ ಬಾರಿ ಕಳಹಿಸಿದ ತಿಳುವಳಿಕೆ ಪತ್ರವನ್ನು ಆರೋಪಿ ಯಾವ ದಿನಾಂಕದಂದು ಪಡೆದುಕೊಂಡರು ಎಂದು ನನಗೆ ನೆನಪಿಲ್ಲ. ನಾನು ಪಿ ಡಬ್ಲ್ಯೂಡಿ ಗುತ್ತಿಗೆದಾರರ ಮತ್ತು ಜಮೀನಲ್ಲಿ ಕೃಷಿ ಮಾಡುತ್ತೇನೆ. ಸದದಿರಿ ಜಮೀನಿನ ಸರ್ವೆ ನಂ

56/1 ರ ವಿಸ್ತೀರ್ಣ 2 ಎಕರೆ 20 ಸೆಂಟ್ಸ ಕೂಡ್ಲೂರು ಗ್ರಾಮದಲ್ಲಿ ಇರುತ್ತದೆ. ಮಳೆ ಆದಾರಿತ ಜಮೀನು ಆಗಿರುತ್ತದೆ ಅದರಲ್ಲಿ ನಾನು ಬೋರ್ ವೆಲ್ ಹಾಕಿಸಿಕೊಂಡಿರುತ್ತೇನೆ. ನನ್ನ ತಿಂಗಳ ಖರ್ಚು ಕಳೆದು ವಾರ್ಷಿಕ ರೂ 10 ಲಕ್ಷ ಆದಾಯ ಇರುತ್ತದೆ. ಸುಮಾರು 3 ವರುಷಗಳಿಂದ ವಾರ್ಷಿಕ ವರಮಾನ ರೂ 10 ಲಕ್ಷ ಇರುತ್ತದೆ. ನಾನು ಕೆನರಾ ಬ್ಯಾಂಕ್ ಕೂಡಿಗೆ , ಇಂಡಿಯನ್ ಒವರ್ ಸೀಸ್ ಬ್ಯಾಂಕ್ ಮಡಿಕೇರಿ ಶಾಖೆಯಲ್ಲಿ ಖಾತೆಯನ್ನು ಹೊಂದಿರತ್ತೇನೆ. ಈ ಎರಡೂ ಖಾತೆಗಳು ಚಾಲ್ತಿಯಲ್ಲಿರುತ್ತದೆ. ನಾನು ಪ್ಯಾನ್ ಕಾರ್ಡನ್ನು ಹೊಂದಿಕೊಂಡಿರುತ್ತೇನೆ. ನಾನು 3 ವರುಷಗಳಿಂದ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ಸದರಿ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ನನಗೆ ಯಾವುದೆ ತೊಂದರೆ ಇರುವುದಿಲ್ಲ. ನನಗೆ ಇಂತ ವ್ಯಕ್ತಿಯಿಂದ ಹಣ ಬರೆಬೇಕು ಎಂದು ತೆರಿಗೆ ಪಾವತಿ ರಿಟರ್ನಲ್ಲಿ ತೋರಿಸಬೇಕು ಎಂದರೆ ಸರಿ . ಸಾಕ್ಷಿಯು ಮುಂದುವರೆದು ಸದರಿ ಸಾಲ ಕೃಷಿಯಿಂದ ಬಂದ ಆದಾಯದಿಂದ ಕೊಟ್ಟ ಸಾಲ ಎಂದು ನುಡಿದರು.

ನಾನು ಸೆಪ್ಟೆಂಬರ್ 2020 3 ನೆ ವಾರದಂದು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ ದಿನಾಂಕ ನನಗೆ ನೆನಪಿರುವುದಿಲ್ಲ. ನಾನು 3 ನೆ ವಾರ ಸೆಪ್ಟೆಂಬರ್ 2020 ರಂದು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ತಿಳುವಳಿಕೆ ಪತ್ರದಲ್ಲಿ ಪಿರ್ಯಾದಿನಲ್ಲಿ ಅಥವಾ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರೂ 5 ಲಕ್ಷ ನನ್ನ ಮನೆಯಲ್ಲಿ ನಗದು ರೂಪದಲ್ಲಿ ಇಟ್ಟಿದ್ದೆ. ಸದರಿ ಹಣವನ್ನು ಕೃಷಿ ಫಸಲಿನಿಂದ ಬಂದ ಆದಾಯವಾಗಿರುತ್ತದೆ. ನಾನು ನನ್ನ ಜಮೀನಲ್ಲಿ ಶುಂಠಿ ಬೆಳೆದು ಮಾರಿ ಬಂದ ಹಣದಿಂದ ಆರೋಪಿಗೆ ಸಾಲ ನೀಡಿರುತ್ತೇನೆ. ಕೂಡಿಗೆಯಲ್ಲಿ ವಾಸವಿರುವ

ಪ್ರಭಾರವರಿಗ ಶುಂಠಿಯನ್ನು ಮಾರಿರುತ್ತೇನೆ. ಅದಕ್ಕೆ ಸಂಬಂದಿಸಿದಂತೆ ಪ್ರಭಾ ರವರು ಯಾವುದೆ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಪ್ರಭಾರವರು ಶುಂಠಿಯನ್ನು ಖರೀದಿ ಮಾಡಿದ್ದಕ್ಕೆ ಎಷ್ಟು ಚೀಲ , ಎಷ್ಟು ಬೆಲೆ ಎಂದು ಅವರ ಪುಸ್ತಕದಲ್ಲಿ ನಮೂದು ಮಾಡಿಕೊಂಡಿದ್ದಾರಾ ಎಂದರೆ ಗೊತ್ತಿಲ್ಲ. ಪ್ರಭಾ ರವರು ಶುಂಠಿಯನ್ನು ಮಾರಿದ ಹಣ ರೂ 5,38,000/- ಹಣವನ್ನು ನನಗೆ ಕೊಟ್ಟಿರುತ್ತಾರೆ. ಪ್ರಭಾರವರು ಅಂಗಡಿ ನಡೆಸುತ್ತಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಮತ್ತು ಪರವಾನಗಿ ಇದೆಯೋ ಇಲ್ಲವೊ ಎಂಬ ಮಾಹಿತಿ ಇಲ್ಲ. ನಾನು ಆರೋಪಿ ಗೆ ಹಣವನ್ನು ಮನೆಯಲ್ಲಿ ಕೊಟ್ಟಿರುತ್ತೇನೆ.

ಆರೋಪಿಗೆ ಹಣ ಕೊಡುವ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೆವು. ಆರೋಪಿಗೆ ಹಣ ಕೊಡಬೇಕಾದರೆ ಅದನ್ನು ನಾನು ಎಣಿಸಿ ಕೊಟ್ಟಿರುತ್ತೇನೆ. ಸೆಪ್ಟೆಂಬರ್ 2020 3 ನೆ ವಾರದಂದು ಹಣವನ್ನು ಕೊಟ್ಟೆ ಎಂದು ಹೇಳಿದ ದಿನ ಯಾವುದೆ ದಾಖಲಾತಿ ಪಡೆದಿರುವುದಿಲ್ಲ ಸಾಕ್ಷಿಯು ಮುಂದುವರೆದು ನನ್ನ ಡೈರಿಯಲ್ಲಿ ಬರೆದುಕೊಂಡಿರುತ್ತೇನೆ ಎಂದು ನುಡಿದರು. ನಾನು ಆರೋಪಿಗೆ ಹಣವನ್ನು ಮರು ಪಾವತಿಗಾಗಿ ಕೇಳಿದಾಗ ಅವರು ದಿಃ 30.07.2021 ರಂದು ಆರೋಪಿ ನನಗೆ ಚೆಕ್ ನ್ನು ಅವರೇ ಬರೆದುಕೊಟ್ಟಿರುತ್ತಾರೆ . ಆರೋಪಿ ಎಲ್ಲಿಯವರೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾವ ಯಾವ ಭಾಷೆ ಮಾತನಾಡುತ್ತಾರೆ ಮತ್ತು ಬರೆಯುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದು ನಾನು ಗಮನಿಸಿರುವುದಿಲ್ಲ. ಆರೋಪಿಗೆ ಓದಲು ಬರೆಯಲು ಬರುವುದಿಲ್ಲ ಆದ್ದರಿಂದ ಆರೋಪಿ ಯಾವುದೆ ಚೆಕ್ ನ್ನು ನೀಡಿರುವುದಿಲ್ಲ ಎಂದರೆ

ಸರಿಯಲ್ಲ. ಈ ಪ್ರಕರಣವನ್ನು ಹೊರತುಪಡಿಸಿ ಇನ್ನೊಂದು ಪ್ರಕರಣವನ್ನು ಬೇರೆಯವರ ಮೇಲೆ ದಾಖಲು ಮಾಡಿರುತ್ತೇನೆ. ಪಿರ್ಯಾದಿನ್ನು ನಾನೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿ . ನಿಪಿ 1 ರಲ್ಲಿ ಬರೆದಿರುವ ಅಂಶಗಳು ಯಾವ ಬರವಣಿಗೆಯಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ಕನ್ನಡದಲ್ಲಿ ಇರಬಹುದು ಎಂದು ನುಡಿದರು. ಆರೋಪಿಯು ನನಗೆ ಚೆಕ್ ಕೊಡದಿದ್ದರೂ ಅವರ ಕೆಲವೊಂದು ಚೆಕ್ ಗಳು ದುರುಪಯೋಗವಾಗಿರಬಹುದು ಎಂದು ತಿಳಿದು ಬ್ಯಾಂಕ್ ಗೆ ಅರ್ಜಿಯನ್ನು ಕೊಟ್ಟು ಖಾತೆಯನ್ನು ಮುಚ್ಚಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೆ ನನಗೆ ಚೆಕ್ ಕೊಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಯಾವುದೆ ಒಂದು ವ್ಯಕ್ತಿಯನ್ನು ರೂ 20 ಸಾವಿರ ಹಣವನ್ನು ಕೊಡಬೇಕಾದರೆ ಚೆಕ್ ಮೂಲಕ ಕೊಡಬೇಕು ಎಂದು ನಿಯಮವಿದೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕ ನಲ್ಲಿ ವ್ಯವಹಾರಿಕವಾಗಿ ಹಣಕಾಸಿಗೆ ಸಂಬಂದಿಸಿದಂತೆ ನಡೆಯುವ ವಹಿವಾಟುಗಳ ಬಗ್ಗೆ ನನಗೆ ತಿಳಿದಿದೆ.

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ